ದಿನಾಂಕ 15.04.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ. ಎನ್ ಟಿ ವಕೀಲರಿಂದಃ

ನನಗೆ ಬಂದ ಆಸ್ತಿಗಳು ನನ್ನ ತಂದೆಯ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಎಂದರೇ ಹೌದು. ಆದರೆ ನಮ್ಮ ತಂದೆಯವರಿಗೆ ಸ್ವಯಾರ್ಜಿತ ಆಸ್ತಿಗಳು ಸಹ ಇದ್ದವು. ನನ್ನ ಪ್ರತಿವಾದ ಪತ್ರದಲ್ಲಿರುವ ಅಂಶಗಳನ್ನು ನಾನೇ ಓದಿ, ಬರೆದು ಹಾಕಿಸಿದ್ದೇನೆ. ನಿಮ್ಮ ತಂದೆಯವರ ಸ್ವಯಾರ್ಜಿತ ಆಸ್ತಿಗಳು ಯಾವುದು ಎಂದರೇ ಸರ್ವೆ ನಂ 64 ರಲ್ಲಿ 2 ಎಕರೆ 30 ½ ಗುಂಟೆ, ಸರ್ವೆ 220 ರಲ್ಲಿ 3 ಎಕರೆ 30 ಗುಂಟೆ, ಸರ್ವೆ 64 ರಲ್ಲಿ 2 ಎಕರೆ 30 ಗುಂಟೆ ಸ್ವಯಾರ್ಜಿತ ಆಸ್ತಿ. ಅಲ್ಲದೆ ಒಂದು ಮನೆಯ ಸ್ವತ್ತು ಸಹ ತಂದೆಯವರ ಸ್ವಯಾರ್ಜಿತ ಸ್ವತ್ತು ಇದೆ. ನನ್ನ ತಂದೆಯ ಜೀವಿತಾವಧಿಯಲ್ಲಿ ಒಟ್ಟು ಕುಟುಂಬದ ಆಸ್ತಿಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು. ನಮ್ಮ ಮನೆಯಲ್ಲಿ ನಾನು ಎಲ್ಲಾರಿಗಿಂತ ಹೆಚ್ಚು ಓದಿದ್ದೇನೆ ಎಂದರೇ ಹೌದು. ಅದೇ ರೀತಿ ನಮ್ಮ ಮನೆಯಲ್ಲಿ ಸರ್ಕಾರಿ ಕೆಲಸಕ್ಕೆ ನಾನು ಒಬ್ಬನೇ ಸೇರಿದ್ದೇನೆ ಎಂದರೇ ಹೌದು. ನನಗೆ ಕಾನೂನು ತಿಳುವಳಿಕೆ ಚೆನ್ನಾಗಿದೆ ಎಂದರೇ ಹೌದು. ನಿಮ್ಮಯವರು ತಂದೆ ಮೃತ ಪಟ್ಟ ನಂತರ ಆಸ್ತಿಗಳನ್ನು ಯಾರು ನೋಡಿಕೊಳ್ಳುತ್ತಿದ್ದರು ಎಂದರೇ ಸಾಕ್ಷಿ ವಿಭಾಗ ಮಾಡಿಕೊಂಡಿರುತ್ತೇವೆ.

2. ಯಾವ ವರ್ಷದಿಂದ ಪ್ರತೇಕವಾಗಿ ವ್ಯವಸಾಯ ಮಾಡುತ್ತಿದ್ದಾರೆಂದರೇ ದಿ 25.04.2010 ರಲ್ಲಿ ವಿಭಾಗ ಪತ್ರ ಮಾಡಿಕೊಂಡು ಅಲ್ಲಿಂದ ಪ್ರತೇಕವಾಗಿ ವಾಸ ಮಾಡುತ್ತಿದ್ದಾರೆ. ದಿ 25.04.2010 ರ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೇ ಹೌದು. ವಿಭಾಗ ಪತ್ರವನ್ನು ಎಲ್ಲಿ ಮಾಡಿಕೊಂಡಿದ್ದೀರ ಎಂದರೇ ನಮ್ಮ ಊರಿನಲ್ಲಿ ಕುಟುಂಬದ ಆಪ್ತರ ಸಮಕ್ಷಮದಲ್ಲಿ ಮಾಡಿಕೊಂಡಿದ್ದೇನೆ. ದಿ 25.04.2010 ರಂದು ನಮ್ಮ ಆಪ್ತ ಸಮಲೋಚಕರು ನಡುವೆ ಸೇರಿಕೊಂಡು ಮಾಡಿಕೊಂಡ ಪತ್ರ ಎಂದರೇ ಹೌದು. ಆ ಸಮಯದಲ್ಲಿ ನಿಮ್ಮ ನಡುವೆ ಯಾವುದಾದರೂ ವೈಮನಸ್ಸು ಮತ್ತು ಜಗಳ ಇತ್ತ ಎಂದರೇ ಇಲ್ಲ. ಪತ್ರ ಮಾಡಿಕೊಳ್ಳುವಾಗ ಯಾರು ಯಾರು ಇದ್ದಾರೆ ಎಂದರೇ ಸಾಕ್ಷಿ ನಮ್ಮ ತಾಯಿ ಹಾಗೂ ಎಲ್ಲಾ ಕುಟುಂಬದ ಸದಸ್ಯರು ಮತ್ತು ಸಾಕ್ಷಿದಾರರು ಇದ್ದರು. ಭಾಗ ಮಾಡಿಕೊಳ್ಳುವಾಗ ನಿಮ್ಮ ತಾಯಿಯವರಿಗೆ ಅಚ್ಚು ಪಾಲು ಕೊಟ್ಟಿದ್ದೀರ ಎಂದರೇ ಇಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಯವರನ್ನು ನಾನೇ ನೋಡಿಕೊಳ್ಳುತ್ತೇನೆ ಎಂದಾಗ ಭಾಗ ಬೇಡ ಎಂದು ಹೇಳಿದ್ದೇನೆ. ನಿಡಿ-7ರ ದಸ್ತವೇಜು ಹಾಳೆಗಳು 2015 ರ ನಂತರ ಆಗಿರುವ ಹಾಳೆಗಳು ಎಂದರೇ ಸುಳ್ಳು.

3. ನಿಡಿ-7 ರಲ್ಲಿ ನಾಗಮ್ಮ ಎಂಬುವವರ ಸಹಿ ಇದ್ದು ಯಾವುದು ಸಹಿಗಳಿಗೂ ಕ್ರಾಸ್ ಮಾರ್ಕ್ ಇರುವುದಿಲ್ಲ ಆದರೇ ನಾಗಮ್ಮರವರಿಗೆ ಸಹಿಗೆ ಕ್ರಾಸ್ ಮಾರ್ಕ್ ಯಾಕೆ ಇದೆ ಎಂದರೇ ಸಹಿ ಮಾಡುವುದನುನ ತೋರಿಸಲು ಹಾಕಿದ್ದಾರೆಂದು ಹೇಳುತ್ತಾರೆ. ಎಲ್ಲಾ ಪುಟಗಳಲ್ಲಿ ನಾಗಮ್ಮರವರ ಸಹಿಗಳನ್ನು ಕೊನೆಯಲ್ಲಿ ಹಾಕಿಸಿರುವುದಕ್ಕೆ ಕಾರಣ ಎಂದರೇ ಆಕೆ 7ನೇ ಕುಟುಂಬ ಸದಸ್ಯರಾದ ಕಾರಣ ಕೊನೆಯಲ್ಲಿ ಹಾಕಿಸಿದ್ದೇನೆ. ಆ ರೀತಿ ಹಾಕಿಸಬೇಕಾಗಿದ್ದಾರೆ ಕೃಷ್ಣಪ್ಪ ರವರ ಸಹಿ ಕೊನೆಯಲ್ಲಿ ಬರಬೇಕಾಗಿತ್ತು ಎಂದರೇ ಸರಿಯಲ್ಲ. ಆ ಸಮಯದಲ್ಲಿ ನಿಡಿ-7 ನೋಂದಾವಣಿ ಆಗಿರುವುದಿಲ್ಲ ಆ ಸಮಯದಲ್ಲಿ ವಾದಿಯ ಸಹಿಯನ್ನು ಖಾತೆ ವಿಚಾರವಾಗಿ ತಾಲ್ಲೂಕು ಕಚೇರಿಯಲ್ಲಿ ಪಡೆದು ನಂತರ ನಿಡಿ-7 ಕ್ಕೆ ಶುಲ್ಕವನ್ನು ಪಾವತಿ ಮಾಡಿದ್ದೇವೆ ಎಂದರೇ ಸುಳ್ಳು. ದಿ 25.04.2010ರಂದು ಸಹಿ ಮಾಡಿದ್ದೇನೆ. ನಿಡಿ-7 ಕ್ಕೆ ನಾಗಮ್ಮ ಸಹಿ ಮಾಡಿಲ್ಲ ಎಂದು ಅವರೆ ಸಹಿ ಮಾಡಿಲ್ಲ ಎಂದರೇ ಸುಳ್ಳು. ನಿಡಿ-7 ರಲ್ಲಿರುವ ಸಹಿಗಳು ನಾಗಮ್ಮ ರವರಿಗೆ ಸಂಬಂದ ಪಟ್ಟಿಲ್ಲದ್ದಲ್ಲ ಎಂದು ಖಚಿತ ಪಡಿಸಿಕೊಳ್ಳಲು ಎಂದರೇ ಪ್ರಜ್ಞೆರ ಅಭಿಪ್ರಾಯಕ್ಕೆ ಕಳುಹಿಸಿಕೊಡಲು ತೊಂದರೆ ಇದೆಯಾ ಎಂದರೇ ಅಗತ್ಯವಿಲ್ಲ.

4. ಐಟಂ 3 ರಂದ 7 ಮನೆಗಳಿಗೆ ಒಂದೇ ಮೀಟರ್ ಇದೆಯಾ ಎಂದರೇ ಸುಳ್ಳು. ನಾನು ಆ ಮನೆಯಲ್ಲಿ ವಾಸ ಮಾಡುತ್ತಿಲ್ಲ ಬೇರೆ ಇದ್ದೇನೆ ಎಂದರೇ ಸರಿ ಹಾಗೂ ನನ್ನ ಉಳಿದ ಅಣ್ಣಂದಿರು ಆ ಮನೆಯಲ್ಲಿ ಬೇರೆ ಬೇರೆ ವಾಸ ಮಾಡುತ್ತಿದ್ದಾರೆಂದರೇ ಭಾಗದ ಪ್ರಕಾರ ಬಂದ ಸ್ವತ್ತಿನಲ್ಲಿ ಬೇರೆ ಬೇರೆ ವಾಸ ಇದ್ದಾರೆ. ಈಗಲೂ ಸಹ ನನ್ನ ಅಣ್ಣಂದಿರು ಒಂದೇ ಸೂರಿನ ಅಡಿಯಲ್ಲಿ ಒಂದೇ ಮೀಟರ್ ಮತ್ತು ನೀರನ್ನು ಬಳಸಿಕೊಂಡು ಅವಿಭಕ್ತವಾಗಿ ವಾಸ ಇದ್ದಾರೆ ಎಂದರೇ ಪ್ರತ್ಯೇಕ ಸೂರಿನ ಅಡಿ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ. ಈಗಲೂ ವಿಭಕ್ತ ಕುಟುಂಬ ಇದ್ದ ಕಾರಣ 2025 ರಲ್ಲಿ ಮರ ಕಡಿಯುವ ವಿಚಾರದಲ್ಲಿ ವಾದಿ ನನ್ನ ಹಾಗೂ ಉಳಿದ ಪ್ರತಿವಾದಿ 3, 4 ಮತ್ತು 8 ರವರ ವಿರುದ್ದ ದೂರು ನೀಡಿ ಖಾಸಗಿಪಿರ್ಯಾದಿ ದಾಖಲಿಸಿದ್ದೀರ ಎಂದರೇ ನಾನು ಆ ಖಾಸಗಿಪಿರ್ಯಾದಿಯಲ್ಲಿ ಪಕ್ಷಗಾರರರು ಅಲ್ಲ. ಆ ಖಾಸಗಿಪಿರ್ಯಾದಿ ನಲ್ಲಿ ನಾನು ಸಹ ಪಕ್ಷಗಾರ ಎಂದರೇ ಗೊತ್ತಿಲ್ಲ ನನ್ನ ಗಮನಕ್ಕೆ ಇಲ್ಲ. ನಿಡಿ-7 ರಲ್ಲಿ ನಿಮಗೆ ಹೆಚ್ಚಾಗಿ 1 ಎಕರೆ ಬರಬೇಕೆಂದು ಯಾಕೆ ನಮೂದು ಮಾಡಿಕೊಂಡಿದ್ದೀರಿ ಎಂದರೇ ನನ್ನ ತಾಯಿ ಹಾಗೂ ನನ್ನ ತಾಯಿ ಹಾಗೂ ಎಲ್ಲಾ ಕುಟುಂಬದ ಸದಸ್ಯರು ಒಪ್ಪಿ ನನಗೆ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಪಿ ಸಿ ಆರ್ 44/2025 ರಲ್ಲಿ ನಾನು 1ನೇ ಆರೋಪಿ ನನ್ನ ಗಮನಕ್ಕೆ ಇಲ್ಲ.

5. ನಮ್ಮ ತಂದೆ ಇದ್ದಾಗ ಭಾಗದ ವಿಚಾರವಾಗಿ ಜಗಳ ನಡೆಯುತ್ತಿತ್ತು ಎಂದರೇ ಇಲ್ಲ. ನಮ್ಮ ತಂದೆಯವರು ಸಾಯುವ ಸಂದರ್ಭದಲ್ಲಿ ವಿಭಾಗ ಮಾಡಿಕೊಡ ಬೇಕೆಂದು ಗಲಾಟೆ

ಮಾಡಿದಾಗ ನಾನು ಜೀವಂತ ಇದ್ದಾಗ ಮಾಡಿಕೊಡುವುದಿಲ್ಲ ಎಂದು ಹೇಳಿ ಅದೇ ಕೊರಗಿನಲ್ಲಿ ಮೃತ ಪಟ್ಟಿದ್ದಾರೆ ಎಂದರೇ ಸುಳ್ಳು. ವಿಭಾಗ ದ ವಿಚಾರವಾಗ 2015 ರಲ್ಲಿ ತಾಯಮ್ಮ ರವರ ಮಾವನ ಮನೆಯಲ್ಲಿ ಮಾತುಕತೆಗೆ ಸೇರಿದ್ದರು ಎಂದರೇ ಸುಳ್ಳು. ತಾಯಮ್ಮ ಮತ್ತು ನಾಗಮ್ಮ ತಲಾ 50,000/- ಪಡೆದು ನನಗೆ ಯಾವುದೇ ಹಕ್ಕು ಖುಲಾಸೆ ಮಾಡಿಕೊಟ್ಟಿಲ್ಲ ಎಂದರೇ ಸರಿಯಲ್ಲ. 50 ಸಾವಿರ ರೂಗಳನ್ನು Account ಮೂಲಕ ಸಂದಾಯ ಮಾಡಿದ್ದೀರ ಎಂದೆರೇ ನಗದಾಗಿ ಮಾಡಿದ್ದೇನೆ. ನಾಗಮ್ಮ ಮತ್ತು ತಾಯಮ್ಮ ಹಣ ಪಡೆದಿರುವುದಕ್ಕೆ ರಶೀದಿ ಪಡೆದ್ದೀರ ಎಂದರೇ ಇಲ್ಲ. ಆದರೆ ವಿಭಾಗ ಪತ್ರಕ್ಕೆ ಸಹಿ ಪಡೆದಿದ್ದೇನೆ. ನಿಡಿ-7 ರ ಸಾಕ್ಷಿದಾರರು ನ್ಯಾಯಾಲಯದಲ್ಲಿ ವಿಚಾರಕ್ಕೆ ಒಳಪಡಿಸಲು ತೊಂದರೇ ಇದೆಯಾ ಎಂದರೇ ಇಲ್ಲ. ನಿಪಿ-7 ನ್ನು ದಾವೆ ದಾಖಲು ಮಾಡಿದ ನಂತರ ಸೃಷ್ಟಿ ಮಾಡಿದ್ದೇವೆ ಎಂದರೇ ಇಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)